# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಹಿರೇಕೆರೂರು

**ಸಿ ಸಿ ನಂ. ೨೪ : ೨೦೧೩**

ಸಿ ಡಬ್ಲ್ಯೂ : ೬
ಪಿ ಡಬ್ಲ್ಯೂ : ೫

ಹೆಸರು : ಕುಮಾರ

ತಂದೆ: ಗಂಡನ ಹೆಸರು : ಪಾಂಡಪ್ಪ ಗಾಯಕವಾಡ

ವಯಸ್ಸು : ೩೭ ವರ್ಷ

ಉದ್ಯೋಗ : ಕೂಲಿ

ವಾಸ ಸ್ಥಳ : ಮಾಸೂರು

ಇಂದು ದಿನಾಂಕ : ೨೩-೧೧-೨೦೧೬ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸಸಅ ರವರಿಂದ

ಆರೋಪಿ ಮತ್ತು ಪಿರ್ಯಾದಿ ಪರಿಚಯವಿದೆ. ದಿ: ೨೬-೮-೨೦೧೨ ರಂದು ಸಾಯಂಕಾಲ ೫.೩೦ ಗಂಟೆ ಸಮಯದಲ್ಲಿ ಮಾಸೂರಿನಲ್ಲಿ ಇರುವ ಕೋಟೆ ಹತ್ತಿರ ಜಗಳವಾಗಿತ್ತು. ಪಿರ್ಯಾದುದಾರ ಮತ್ತು ಆರೋಪಿ ಇಬ್ಬರೂ ಜಗಳ ಮಾಡಿಕೊಂಡು ಬರುತ್ತಿದ್ದರು ಆ ಸಮಯದಲ್ಲಿ ನಾನೇ ಗಲಾಟೆ ಬಿಡಿಸಿ ಸಮಾದಾನಪಡಿಸಿದೆ. ಆರೋಪಿ ಪಿರ್ಯಾದಿಯ ಕೊರಳ ಪಟ್ಟಿಯನ್ನು ಪಿರ್ಯಾದಿದಾರ ಆರೋಪಿ ಕೊರಳ ಪಟ್ಟಿಯನ್ನು ಹಿಡಿದು ಜಗಳವಾಡುತ್ತಿದ್ದರು. ನಾನು ಜಗಳ ಬಿಡಿಸಿ ಸಮಾದಾನಪಡಿಸಿದೆ. ಆರೋಪಿ ಮತ್ತು ಪಿರ್ಯಾದುದಾರ ಯಾವ ಕಾರಣಕ್ಕೆ ಗಲಾಟೆ ಮಡಿಕೊಂಡು ಬರುತ್ತಿದ್ದರು ಅಂತಾ ಗೊತ್ತಿಲ್ಲ. ನಾನು ಇಬ್ಬರೂ ಬಿಡಿಸಿ ಸಮಾದಾನ ಮಾಡಿ ಕಳುಹಿಸಿದೆ ಮುಂದೆ ಏನಾಯಿತು ಅಂತಾ ಗೊತ್ತಿಲ್ಲ. ಪೊಲೀಸರು ನನಗೆ ಈ ಗಟನೆ ಬಗ್ಗೆ ವಿಚಾರಿಸಿಲ್ಲ ಮತ್ತು ನಾನು ಪೊಲೀಸರ ಮುಂದೆ ಹೇಳಿಕೆ ಸಲ್ಲಿಸಿಲ್ಲ. ಮತ್ತು ನ್ಯಾಯಾಲಯದ ಮುಂದೆ ಇರುವ ಚಪ್ಪಲಿಯನ್ನು ನೋಡಿಲ್ಲ.

( ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿದ್ದರಿಂದ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟಿ ಸವಾಲು: ಮಾನ್ಯ ಎಪಿಪಿ ಯವರಿಂದ

ದಿಃ ೨೬–೮–೨೦೧೨ ರಂದು ಸಂಜೆ ೬.೩೦ ಗಂಟೆಗೆ ನಾನು ಹಾಗೂ ನಮ್ಮೂರ ಜನರು ನಮ್ಮೂರ ರಾಮಪ್ಪ ದೇವಾಂಗದ ಅಂಗಡಿ ಎದುರು ಇದ್ದಾಗ ಅಲ್ಲಿ ಮೋಹನನು ಕೂಡಾ ಇದ್ದನು ಆ ಕಾಲಕ್ಕೆ ಏಕಾ



ಏಕೀ ಇಲ್ಲಿಗೆ ಬಂದ ಪರಮೇಶಪ್ಪ ಕ್ಷತ್ರಿ ಈತನು ಮೋಹನನಿಗೆ ಏನಲೇ ಸೂಳೆ ಮಗನೇ ನನ್ನ ವಿರುದ್ದ ನೀನು ಮೇಲಿನ ಅದಿಕಾರಿಗಳಿಗೆ ಪಂಚಾಯಿತಿಯಲ್ಲಿ ––––––––––––––––––––––––––––––––– –––––––– ಮೋಹನನ ಹಣೆಯ ಎಡಕ್ಕೆ, ಎದೆಗೆ, ಮೈಕೈಗೆ ಹೊಡೆದು ನಂತರ ನಾನು ಮತ್ತು ಕೂಡಿದ ಜನರು ಕೂಡಿ ತಂಟೆ ಬಿಡಿಸಿದ್ದು ಇರುತ್ತದೆ ಅಂತಾ ನಾನು ಪೊಲಿಸರ ಮುಂದೆ ಹೇಳಿಕೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ ಸದರಿ ಹೇಳಿಕೆ ಬಾಗವನ್ನು ನಿಪಿ ೩ ಅಂತಾ ಗುರುತಿಸಲಾಯಿತು. ಆರೋಪಿ ಪಿರ್ಯಾದುದಾರನಿಗೆ ನ್ಯಾಯಾಲಯದ ಮುಂದೆ ಇರುವ ಚಪ್ಪಲಿಯಿಂದ ಹೊಡೆದು, ಅವಾಚ್ಯ ಶಬ್ದಗಳಿಂದ ಬೈದು, ಪೊಲೀಸರ ಮುಂದೆ ಹೇಳಿಕೆ ಸಲ್ಲಿಸಿದ್ದರೂ ಸಹಿತ ಆರೋಪಿಗೆ ಸಹಾಯ ಮಾಡಲೆಂದು ಇಲ್ಲಾ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟಿ ಸವಾಲು ಃ ಆರೋಪಿ ಪರ ವಕೀಲರಿಂದಃ ಇಲ್ಲಾ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ,

ಹಿರಿಯ ಸಿ ಜೆ ಮತ್ತು ಜೆ ಎಂ ಎಫ್ ಸಿ

ಹಿರೇಕೆರೂರು